ಅ) ರಾಜ್ಯದಲ್ಲಿ ಒಟ್ಟು 19 ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಕಾಲೇಜುಗಳಿದ್ದು, ಇದರಲ್ಲಿ 11 ಮತ್ತು 6 ಕಾಲೇಜುಗಳು ಕ್ರಮವಾಗಿ ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಗೊಳಪಟ್ಟಿದೆ.

ಆ) ಹೌದು.

ಇ) ಪರಿಶೀಲನೆಯಲ್ಲಿದೆ.

ವಿಷಯ: ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವ ಕಾರ್ಯವಿಳಂಬ.

2680 (3982)

ಶ್ರೀ ಬಿ.ಶಿವರಾಮು (ಗಂಡಸಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಅಕ್ರಮ : ಒತ್ತುವರಿ ಭೂಮಿ ಸಕ್ರಮಗೊಳಿಸಲು ಬಂದಿದ್ದ ಅರ್ಜಿಗಳಲ್ಲಿ (ಕಾನೂನು ರೀತಿ) ವಿತರಣೆಯಾಗದೆ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಉಳಿದಿರಲು ಕಾರಣವೇನು?

ಆ) ಅರ್ಜಿಗಳನ್ನು ಸಲ್ಲಿಸದೇ ಅಥವಾ ನಂತರ ಒತ್ತುವರಿಯಾಗಿರುವ ಭೂಮಿಯ ಸಕ್ರಮಕ್ಕೆ ಸರ್ಕಾರ ಅವಕಾಶ ಕಲ್ಪಿಸುತ್ತಿದೆಯೇ; ಹಾಗಿದ್ದಲ್ಲಿ ಯಾವಾಗ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) ಸಕ್ರಮ ಸಮಿತಿಗಳ ಮುಂದೆ ಬಾಕಿ ಇರುವ ಅರ್ಜಿಗಳ ಒಟ್ಟು ಸಂಖ್ಯೆ: 3,15,353.

ಆ) ಸರ್ಕಾರದ ಪರಿಶೀಲಿನೆಯಲ್ಲಿರುತ್ತದೆ.

ವಿಷಯ: ಬಗರ್ ಹುಕುಂ ಸಾಗುವಳಿದಾರರಿಗೆ ಸಕ್ರಮ.

2684 (4047)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಬಗರ್ ಹುಕುಂ ಸಾಗುವಳಿದಾರರ ಸಂಖ್ಯೆ ಎಷ್ಟು? ಎಷ್ಟು ಸಾಗುವಳಿದಾರರಿಗೆ ಭೂಮಿಯನ್ನು ಸಕ್ರಮಗೊಳಿಸಲಾಗಿದೆ?

ಅ) ಈ ಸಾಗುವಳಿದಾರರಿಗೆ ಸಕ್ರಮಗೊಳಿಸಲು ಅರ್ಜಿ ಸಲ್ಲಿಸಲು ಈಗ ನಿಗದಿಪಡಿಸಿದ್ದ ಅವಧಿಯನ್ನು ವಿಸ್ತರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) ಬಗರ್‌ಹುಕುಂ ಸಾಗುವಳಿದಾರರ ಸಂಖ್ಯೆ. ಒಟ್ಟು - 10,06,826 ಸಕ್ರಮಗೊಳಿಸಲಾದ ಸಾಗುವಳಿದಾರರ ಸಂಖ್ಯೆ. ಒಟ್ಟು 2,92,941.

ಆ) ಇಲ್ಲ. ಅರ್ಹ ವ್ಯಕ್ತಿಗಳಿಗೆ ಯಾವ ರೀತಿಯ ಸಹಾಯ ಮಾಡಬೇಕೆಂಬ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ವಿಷಯ: ಪೌಷ್ಟಿಕ ಆಹಾರ ಸರಬರಾಜು

2685 (2726)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಕಲ್ಯಾಣ ಇಲಾಖೆಗೆ ಆಗ್ರೊ ಕಾರ್ನರವರು ಅಗತ್ಯವಿರುವಷ್ಟು ಅಥವಾ ಬೇಡಿಕೆ ಸಲ್ಲಿಸಿದಷ್ಟು ಪೌಷ್ಟಿಕ ಆಹಾರ ಸರಬರಾಜು ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಈ ಹಿಂದೆ ಸಮರ್ಪಕವಾಗಿ ಈ ಪೂರೈಕೆಗಳನ್ನು ಮಾಡುತ್ತಿದ್ದ ಟೋಟೋ ಫುಡ್ಸ್ ಸಪ್ಲೈಸ್ ಇವರಿಂದ ಸರಬರಾಜನ್ನು ನಿಲ್ಲಿಸಲು ಕಾರಣಗಳೇನು?

ಈ) ಈ ಹಂತದಲ್ಲಿ ಪುನಃ ಇವರಿಂದ ಸರಬರಾಜು ಪಡೆದುಕೊಳ್ಳಲು ಇರುವ ತೊಂದರೆಯೇನು?

ಶ್ರೀಮತಿ. ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):

ಅ) ಹೌದು.